

ಮೈಸೂರಿನ ಯಾದವಗಿರಿ ಕೈಗಾರಿಕಾ ಪ್ರದೇಶದಲ್ಲಿ ಹರಡಿಕೊಂಡಿದ್ದ ಜಾವಾ ಕಾರ್ಖಾನೆಯ ವಿಹಂಗಮ ನೋಟ.




ಅಪರೂಪದ ಚಿತ್ರಗಳನ್ನು ಸಂಗ್ರಹಿಸಿರುವ ಮೈಸೂರಿನ 'ಜಾವಾ ಬೈಕ್ ಪ್ರೇಮಿ' ಅಜಯ್.



ಜಾವಾ ವ್ಯವಸ್ಥಾಪಕ ನಿರ್ದೇಶಕ ಎಫ್.ಕೆ ಇರಾನಿ.



1961ರಲ್ಲಿ ಜಾವಾ ಕಾರ್ಖಾನೆಗೆ ಚಾಲನೆ ನೀಡಿದ ಜಯಚಾಮರಾಜ ಒಡೆಯರ್.

ಫ್ಯಾಕ್ಟರಿ ಅವನತಿಯತ್ತ ಸಾಗಲು ಕಾರಣವಾದ ಅಂಶಗಳ ಬಗ್ಗೆ ಈಗಲೂ ಮೈಸೂರಿನಲ್ಲೇ ನೆಲೆಸಿರುವ ಎಫ್.ಕೆ ಇರಾನಿ ಅವರ ಮಗ ರಿಯಾನ್ ಇರಾನಿ ಅನೇಕ ವಿವರ ನೀಡುತ್ತಾರೆ. ಅವರ ಪ್ರಕಾರ 'ಜಾವಾ ಬೈಕ್‌ನ ಕಡಿಮೆ ಇಂಧನ ದಕ್ಷತೆ ಹಾಗೂ ಅತ್ಯಧಿಕ ಹೊಗೆ ಉಗುಳುವ ಎಂಜಿನ್‌ನ ಗುಣ ಬೇಡಿಕೆ ಕಳೆದುಕೊಳ್ಳಲು ಪ್ರಮುಖ ಕಾರಣ.'

'ಫ್ಯಾಕ್ಟರಿಯ ತಾಂತ್ರಿಕ ವಿಭಾಗ ಕಾಲಕ್ಕೆ ತಕ್ಕಂತೆ ಬದಲಾವಣೆಗೆ ಒಗ್ಗಿಕೊಳಲಿಲ್ಲ. ಆರಂಭದಲ್ಲಿ 2000 ಉದ್ಯೋಗಿಗಳು 35 ಸಾವಿರ ಬೈಕ್ ಉತ್ಪಾದಿಸಿದರು. ಆ ನಂತರ ಕಾರ್ಮಿಕರ ಕೌಶಲ್ಯ ವೃದ್ಧಿಸಿ ಕಡಿಮೆ ಮಾನವ ಸಂಪನ್ಮೂಲದಿಂದ ಹೆಚ್ಚು ಬೈಕ್‌ಗಳ ಉತ್ಪಾದನೆ ಸಾಧ್ಯವಾಗಲಿಲ್ಲ. ನಾವು ಕಾರ್ಖಾನೆ ಮೇಲ್ದರ್ಜೆಗೆ ಕೈ-ಹಾಕಿದರೆ ದೊಡ್ಡ ಮೊತ್ತದ ಹಣ ಹೂಡಿಕೆ ಮಾಡಬೇಕಿತ್ತು' ಎನ್ನುತ್ತಾರೆ ಅವರು.

'ಕಂಪೆನಿ ಉಳಿಸಲು ಜಪಾನ್‌ನ ಪ್ರಮುಖ ಬೈಕ್ ಉತ್ಪಾದನಾ ಕಂಪೆನಿಗಳನ್ನು ಜಾವಾಗೆ ಪಾಲುದಾರರಾಗಲು ಕೋರಿದೆವು. ಆದರೆ ಆ ಕಂಪೆನಿಗಳು ಷೇರು ಖರೀದಿಗೆ ಕಠಿಣ ಷರತ್ತು ವಿಧಿಸಿದವು. ಈಗಾಗಲೇ ಮಾರುಕಟ್ಟೆಯಲ್ಲಿ ಚಾಲನೆಯಲ್ಲಿರುವ ಬೈಕ್‌ಗಳೊಂದಿಗೆ ಜಾವ ವಿಲೀನಗೊಳಿಸುವ ಇಚ್ಛೆ ಅವರದಾಗಿತ್ತು. ಜಪಾನ್‌ನ ಕವಾಸಕಿ, ಸುಝುಕಿ, ಹೋಂಡಾ, ಯಮಹಾ ಜತೆಗೆ ಜಾವಾ ವಿಲೀನಗೊಂಡರೆ ಅದರ ಅಸ್ತಿತ್ವ ನಮ್ಮ ಕೈಯಿಂದ ಹೊರಟು ಹೋಗುತ್ತಿತ್ತು. ಗುಂಪಿನಲ್ಲಿ ಹೋಗಲು ಇಚ್ಛೆಯಾಗದೆ ಒಪ್ಪಂದಕ್ಕೆ ಮುಂದಾಗಲಿಲ್ಲ' ಎಂದು ನೆನಪಿಸಿಕೊಳ್ಳುತ್ತಾರೆ ರಿಯಾನ್ ಇರಾನಿ.

'ಮಾರುಕಟ್ಟೆ ಸಮಸ್ಯೆ, ತಾಂತ್ರಿಕತೆ, ಕಾರ್ಮಿಕರ ಸಂಘರ್ಷ ಬಿಗಡಾಯಿಸಿದಾಗ 1989ರಲ್ಲಿ ಫ್ಯಾಕ್ಟರಿನ್ನು ಬೇರೆಯವರಿಗೆ ನೀಡಿದೆವು. ಜಾವಾ ಕಂಪೆನಿಯನ್ನು ಶ್ರಮ ಪಟ್ಟು ಬೆಳೆಸಿದೆವು. ಅದರ ಏಳಿಗೆ ಕಣ್ಣಾರೆ ಕಂಡು ಆನಂದಿಸಿದೆವು. ಆದರೆ ಫ್ಯಾಕ್ಟರಿಯ ವಸ್ತು ಸ್ಥಿತಿ ಸಹಿಸಿಕೊಳ್ಳುವುದು ನಮ್ಮಿಂದ ಕಷ್ಟವಾಗಿತ್ತು. ಆ ನಂತರದ ಬೆಳವಣಿಗೆ ಬಗ್ಗೆ ನಾವು ತಲೆ ಕೆಡಿಸಿಕೊಳ್ಳಲಿಲ್ಲ' ಎಂಬುದು ಅನಿಸಿಕೆ

ಜಾವಾ ಬಿಕ್ಕಟ್ಟು ಸೃಷ್ಟಿಗೆ ಅಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಹೇಳುವ ಮಾತೇ ಬೇರೆ. ಜಾವಾ ಬೈಕ್‌ಗೆ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಯೆ ಇತ್ತು. ರೋಡ್ ಕಿಂಗ್ ಬೈಕ್‌ಗಾಗಿ ಅನೇಕರು ಕಾದು ಕುಳಿತಿದ್ದರು. ಆದರೆ, ಕಂಪೆನಿ ಮಾಲಿತ್ವದ ಸಮಸ್ಯೆಯಿಂದ ಬಿಕ್ಕಟ್ಟು ಸೃಷ್ಟಿಯಾಯಿತು. 'ಕಾರ್ಖಾನೆ ಬಾಗಿಲು ಮುಚ್ಚಿದ ನಂತರ ಕಾರ್ಮಿಕರಿಗೆ ಸೂಕ್ತ ಪರಿಹಾರವನ್ನೂ ನೀಡಿಲ್ಲ. ಒಟ್ಟು ಮೊತ್ತದ ಶೇ.25 ರಷ್ಟು ಭಾಗ ಮಾತ್ರ ಪರಿಹಾರ ಕಾರ್ಮಿಕರಿಗೆ ಸಿಕ್ಕಿದೆ. ಕಾರ್ಖಾನೆ ನಂಬಿದವರು ಈಗಲೂ ಸಂಕಷ್ಟದಲ್ಲಿ ಇದ್ದಾರೆ. ಉಳಿದ ಪರಿಹಾರದ ಮೊತ್ತಕ್ಕೆ ಹೋರಾಟ ನಡೆಸುತ್ತಿದ್ದೇವೆ' ಎನ್ನುತ್ತಾರೆ ಐಡಿಯಲ್ ಜಾವಾ ನೊಂದ ಕಾರ್ಮಿಕರ ವೇದಿಕೆ ಅಧ್ಯಕ್ಷ ಎಂ. ಮಲ್ಲರಾಜೇ ಅರಸ್.

ಇರಾನಿ ಕುಟುಂಬದಿಂದ ಮುಕ್ತವಾದ ಜಾವಾ ಒಂದು ದಶಕದ ಕಾಲ ಹೇಗೋ ಮುನ್ನಡೆಯಿತು. ಮುಂದೆ ಕಾರ್ಮಿಕರ– ಮಾಲೀಕರ ಸಂಘರ್ಷವೇ ಮೈಸೂರಿನಲ್ಲಿ ದೊಡ್ಡ ಸುದ್ದಿಯಾಯಿತು. 1999ರಂದು ಜಾವಾ ಕಾರ್ಖಾನೆ ಬಂದ್ ಆಯಿತು. ಈಗ ಜಾವಾ ಬೈಕ್‌ನ ಅಭಿಮಾನದಿಂದ ಯಾದವಗಿರಿ ಕೈಗಾರಿಕಾ ಪ್ರದೇಶಕ್ಕೆ ಭೇಟಿ ನೀಡಿದರೆ ಭಾರಿ ನಿರಾಸೆ ಆವರಿಸುತ್ತದೆ. ಒಂದೇ ಒಂದೇ ಕುರುಹು ಕೂಡ ಅಲ್ಲಿ ಕಾಣಸಿಗದು. 25 ಎಕರೆ ಬೃಹತ್ ಪ್ರದೇಶದಲ್ಲಿ ಚಾಚಿಕೊಂಡಿದ್ದ ಕಟ್ಟಡವೊಂದು ಹೇಳಲು ಹೆಸರಿಲ್ಲದಂತೆ ಮಾಯವಾಗಿದೆ. ಆ ಸ್ಥಳದಲ್ಲಿ ಬೃಹತ್ ಅಪಾರ್ಟ್‌ಮೆಂಟ್ ನಿರ್ಮಾಣಗೊಂಡಿದೆ.